ದಿನಾಂಕಃ **22.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ವಕೀಲರಿಂದ :**

ನನಗೆ ಬಿ.ಪಿ.ಎಲ್.ರೇಷನ್ ಕಾರ್ಡ್ ಇರುತ್ತದೆ. ಸದರಿ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈಗ ನೋಡುತ್ತಿರುವ ದಾಖಲೆ ನನಗೆ ಸೇರಿದ ರೇಷನ್ ಕಾರ್ಡ್ ಎಂದರೆ ಸರಿ. ಸದರಿ ದಾಖಲೆಯಲ್ಲಿ 2012 ರಲ್ಲಿ ನನಗೆ 29 ವರ್ಷ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆ ಪ್ರಕಾರ ನನಗೆ ಈಗ 42 ವರ್ಷ ವಯಸ್ಸು ಎಂದರೆ ಸಾಕ್ಷಿ ನನಗೆ 31 ವರ್ಷ ವಯಸ್ಸು, ಬೇಕಿದ್ದಲ್ಲಿ ದಾಖಲೆಯನ್ನು ತಂದು ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಆರ್-1** ಎಂದು ಗುರುತಿಸಲಾಯಿತು.

**2.** ನಾನು ಬಸ್ಸಿನಲ್ಲಿ ಸೀಟು ಹಿಡಿಯುವ ಸಲುವಾಗಿ ಕಿಟಕಿಯಲ್ಲಿ ಟವಲ್ ಹಾಕಲು ಹೋದಾಗ ಬಿದ್ದು ಗಾಯಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಬಸ್ ನಿಲ್ದಾಣದಲ್ಲಿ ಎಲ್ಲಾ ಬಸ್ಸುಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಬಸ್ ಗಳು ಫ್ಲಾಟ್ ಫಾರಂ ಗೆ ಬಂದು ನಿಲ್ಲುವವರೆಗೂ ನಾವು ರಸ್ತೆಯಲ್ಲಿ ಓಡಾಡಬಾರದು ಫ್ಲಾಟ್ ಫಾರಂನಲ್ಲಿಯೇ ಇರಬೇಕು ಎಂದು ಬಸ್ ನಿಲ್ದಾಣದಲ್ಲಿ ಅನೌನ್ಸ್ ಮಾಡುತ್ತಾರೆ ಎಂದರೆ ಸರಿ. ಒಂದು ಫ್ಲಾಟ್ ಫಾರಂ ನಿಂದ ಇನ್ನೊಂದು ಫ್ಲಾಟ್ ಫಾರಂ ಗೆ ಹೋಗಲು ಅಂಡರ್ ಗ್ರೌಂಡ್ ವ್ಯವಸ್ಥೆ ಇದೆ ಎಂದರೆ ಸರಿಯಲ್ಲ. ಆ ರೀತಿ ಅಂಡರ್ ಗ್ರೌಂಡ್ ವ್ಯವಸ್ಥೆ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿರ್ಲಕ್ಷ್ಯತೆಯಿಂದ ಸೀಟ್ ಹಾಕಲು ಹೋದ ಕಾರಣ ನನ್ನ ತಪ್ಪಿನಿಂದಲೇ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಬಸ್ ಚಾಲಕ ನಿಧಾನವಾಗಿ ವಾಹನ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**3.** ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ನಾನು ಕಾಲುಜಾರಿ ಬಿದ್ದು ಗಾಯಮಾಡಿಕೊಂಡ ಕಾರಣ KSRTC ಯವರು ನನಗೆ ಮಾನವೀಯತೆ ದೃಷ್ಟಿಯಿಂದ ರೂ.3,800/- ಗಳನ್ನು ವೈದ್ಯಕೀಯ ಖರ್ಚಿಗಾಗಿ ಪಾವತಿ ಮಾಡಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಖಾಲಿ ಹಾಳೆಗೆ ಸಹಿ ಪಡೆದುಕೊಂಡು ನಂತರ ಅದನ್ನು ಬರೆದುಕೊಂಡಿರುತ್ತಾರೆ ಎನ್ನುತ್ತಾರೆ. ಕಾರ್ಬನ್ ಹಾಳೆ ಬಳಸಿ ಸದರಿ ದಾಖಲೆ ಬರೆದಿದ್ದು, ಮೂಲ ದಾಖಲೆ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಆರ್-2** ಎಂದು ಗುರುತಿಸಲಾಯಿತು.

**4.** ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಮಾಸಿಕವಾಗಿ ರೂ.20,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ 17 ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ 3 ಲಕ್ಷ ರೂ.ಗಳನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ಪ್ರತಿದಿನ 1,000/- ರೂ.ಗಳನ್ನು ಸಹಾಯಕನಿಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುವಾಗ ವಾಹನ ಮತ್ತು ಇತರೇ ಖರ್ಚು ಪ್ರತಿಬಾರಿಗೆ ರೂ.5,000/- ಮಾಡಿಲ್ಲ ಎಂದರೆ ಸುಳ್ಳು. ಭವಿಷ್ಯದ ಚಿಕಿತ್ಸೆಯ ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಮುಂಚೆ ನಾನು ಚೆನ್ನಾಗಿದ್ದು, ಈಗಲೂ ಸಹ ಚೆನ್ನಾಗಿರುತ್ತೇನೆ ಎಂದರೆ ಸುಳ್ಳು. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಟೈಲರಿಂಗ್ ಕೆಲಸ ಮಾಡುತ್ತಿರುವ ಬಗ್ಗೆ ಸರ್ಟಿಫಿಕೇಟ್ ಕೊಡುತ್ತಾರೆ ಎಂದರೆ ಸರಿ. ನಾನು ಆ ರೀತಿ ಸರ್ಟಿಫಿಕೇಟ್ ಹಾಜರುಪಡಿಸದ ಕಾರಣ ಟೈಲರಿಂಗ್ ವೃತ್ತಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ. **ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**